ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.,
ಕುಂದಾಪುರ

ಒ.ಎಸ್.ನಂಬ್ರ: 4/2022
ಪಿ.ಡಬ್ಲ್ಯೂ : 1

ದಿನಾಂಕ: 28-01-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರಿದ ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಎನ್ ಎಸ್ ಆರ್ ಬಿ ವಕೀಲರಿಂದ:

1. ಈ ದಾವೆಯನ್ನು ನಾನು ಒಂದೇ ಸರ್ವೆ ನಂಬ್ರಗೆ ಸಂಬಂಧಪಟ್ಟಂತೆ ದಾಖಲಿಸಿರುತ್ತೇನೆ. ಆ ಸರ್ವೆ ನಂಬ್ರ 107/2 ಆಗಿರುತ್ತದೆ. ಅದರ ವಿಸ್ತೀರ್ಣ ನನಗೆ ಗೊತ್ತಿರುವುದಿಲ್ಲ. ಈ ದಾವೆಗೆ ಒಳಗೊಂಡಿರುವುದು ಸರ್ವೆ ನಂಬ್ರ 107/2 ಮಾತ್ರ ಆಗಿರುತ್ತದೆ. ಪ್ರತಿವಾದಿಯ ಕುಟುಂಬದಲ್ಲಿ ಆದ ವಿಭಾಗ ಪತ್ರದ ಬಗ್ಗೆ ನಾನು ಮಾಹಿತಿ ತಿಳಿದುಕೊಂಡಿರುತ್ತೇನೆ. ಅವರ ಕುಟುಂಬದಲ್ಲಿ ಆದ ವಿಭಾಗ ಪತ್ರದ ಯಾವ ಆಸ್ತಿಯ ಮೂಲಕ ದಾರಿಯ ಹಕ್ಕನ್ನು ಉರ್ಜಿತ ಇಟ್ಟಿರುತ್ತಾರೆ ಎಂದರೆ ಸಾಕ್ಷಿ ಸರ್ವೆ ನಂಬ್ರ 107/2 ಹಾಗೂ ಸರ್ವೆ ನಂಬ್ರ 107/1 ರ ಲ್ಲಿ ದಾರಿಯ ಹಕ್ಕನ್ನು ಉರ್ಜಿತ ಇಟ್ಟಿರುತ್ತಾರೆ.

2. ನನಗೆ ಓದಲು ಬರುತ್ತದೆ. ನಿ.ಪಿ.4 ರ ದಾಖಲೆಯಲ್ಲಿ ಸರ್ವೆ ನಂಬ್ರನಲ್ಲಿ ದಾರಿ ಊರ್ಜಿತ ಇಟ್ಟ ಬಗ್ಗೆ ನಮೂದು ಇರುತ್ತದಾ ಎಂದರೆ ಸಾಕ್ಷಿ ಸರ್ವೆ ನಂಬ್ರ 107/1 ರಲ್ಲಿ 2.5 ಸೆಂಟ್ಸ್ ಜಾಗವನ್ನು ದಾರಿಯನ್ನಾಗಿ ವಿಂಗಡಿಸಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ದಾಖಲೆಯಲ್ಲಿ ಸರ್ವೆ ನಂಬ್ರ 107/2 ರ ನಮೂದು ಇರುವುದಿಲ್ಲ ಎಂದರೆ ಸರಿ. ಪ್ರತಿವಾದಿಯ ಸ್ಥಳ ಸುಮಾರು 4-5 ಸ್ಥಳಗಳನ್ನು ಒಳಗೊಂಡ ಜಾಗ ಎಂದರೆ ಸರಿ. ರಾಷ್ಟ್ರೀಯ ಹೆದ್ದಾರಿಯ 66 ರ ದಕ್ಷಿಣ ದಿಕ್ಕಿನಿಂದ ರಸ್ತೆ ಪ್ರಾರಂಭವಾಗಿ ಮತ್ತೆ ದಕ್ಷಿಣ ದಿಕ್ಕಿಗೆ ಮುಂದುವರಿದು ಆ ರಸ್ತೆ ಪೂರ್ವಕ್ಕೆ ತಿರುಗುತ್ತದೆ ಎಂದರೆ ಸರಿ. ಆ ರಸ್ತೆ ಇರುವುದು ಸರ್ಕಾರಿ ಸ್ಥಳದಲ್ಲಿ. ಆ ಸರ್ಕಾರಿ ಸ್ಥಳದ ಸರ್ವೆ ನಂಬ್ರ 108.

3. ಆ ರಸ್ತೆ ಪೂರ್ವಕ್ಕೆ ತಿರುಗಿ ಪ್ರತಿವಾದಿ ಹಾಗೂ ಅವರ ಕುಟುಂಬದ ಸದಸ್ಯರ ಸ್ಥಳದವರೆಗೂ ಹಾದು ಹೋಗುತ್ತದೆ ಎಂದರೆ ಸರಿ. ಅಲ್ಲಿ ಒಂದು ನೀರಿನ ತೋಡು ಇರುತ್ತದೆ ಎಂದರೆ ಸರಿ. ನೀರಿನ ತೋಡು ದಾಟಿ ಹೋದ ನಂತರದಲ್ಲಿ ಪ್ರತಿವಾದಿ ಹಾಗೂ ಅವರ ಕುಟುಂಬದ ಇತರ ಸದಸ್ಯರ ಆಸ್ತಿಗಳು ಇರುತ್ತದೆ ಎಂದರೆ ಸರಿ. ಅಲ್ಲಿ ಆರಂಭ ಆಗುವುದರಲ್ಲಿ ಮೊದಲು ಸಿಗುವುದು ಶ್ರೀಮತಿಯವರ ಜಾಗ ಎಂದರೆ ಸರಿಯಲ್ಲ. ಸಾಕ್ಷಿ ಗೇಟಿನಿಂದ ಆರಂಭವಾಗಿ ನನ್ನ ತಂದೆ ಕೃಷ್ಣಪ್ಪ ಶೆಟ್ಟಿಯವರ ಸರ್ವೆ ನಂಬ್ರ 107/2 ಇರುತ್ತದೆ.

4. ಸರ್ವೆ ನಂಬ್ರ 107/2 ರ ಸ್ಥಳದಲ್ಲಿ ನಮ್ಮ ತಂದೆಯ ಕುಟುಂಬದ ಸ್ಥಳ ಇದೆ ಎಂದು ತೋರಿಸಲು ನಾನು ಪಹಣಿ ಪತ್ರಿಕೆ ಹಾಜರು ಪಡಿಸಿರುತ್ತೇನೆ. ಅದು ನಿ.ಪಿ.2 ಆಗಿರುತ್ತದೆ. ಈ ಆಸ್ತಿಯನ್ನು ನಾನು ದಾವೆಯಲ್ಲಿ ಕಾಣಿಸಿರುವುದಿಲ್ಲ. ಸರ್ವೆ ನಂಬ್ರ 107/2 ಪಿ 1 ರ ಗಡಿಯನ್ನು ನಾನು ನಮೂದು ಮಾಡಿರುವುದಿಲ್ಲ. ಸರ್ವೆ ನಂಬ್ರ 107/2 ರಲ್ಲಿ ಶ್ರೀಮತಿ ಶೆಟ್ಟಿಯವರ ಯಾವುದೇ ಜಾಗ ಇರುವುದಿಲ್ಲ. ಶ್ರೀಮತಿ ಶೆಟ್ಟಿಯವರ ತಾಯಿಯ ಹೆಸರು ಗಿರಿಜಮ್ಮ ಶೆಡ್ತಿ. ಶ್ರೀಮತಿ ಶೆಟ್ಟಿಯ ಸರ್ವೆ ನಂಬ್ರ 107/2 ರ ಜಾಗ ಪ್ಲೋಟಿಂಗ್ ಆಗಿ ಸರ್ವೆ ನಂಬ್ರ 107/20 ಅಂತ ಆಗಿರುತ್ತದೆ ಎಂದರೆ ಸಾಕ್ಷಿ ನನಗೆ ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ.

5. ಶ್ರೀಮತಿ ಗಿರಿಜಮ್ಮ ಶೆಟ್ಟಿಯವರ ಆಸ್ತಿಗೆ ತಾಗಿ ಪೂರ್ವದಲ್ಲಿ ಸರ್ವೆ ನಂಬ್ರ 107/2 ಪಿ 1 ಹಾಗೂ ಸರ್ವೆ ನಂಬ್ರ 107/1 ಎ ಇರುತ್ತದೆ ಎಂದರೆ ಸಾಕ್ಷಿ ಅಲ್ಲಿ ಗಿರಿಜಮ್ಮ ಶೆಟ್ಟಿಯವರ ಆಸ್ತಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂಬ್ರ 107/2 ಪಿ 2 ಹಾಗೂ ಸರ್ವೆ ನಂಬ್ರ 107/2 ಪಿ 4 ಈ ಎರಡು ಸ್ಥಳಗಳ ಪಶ್ಚಿಮದಲ್ಲಿ ಮರದ ಗುಟ್ಟ ಹಾಕಿ ಗೇಟು ಹಾಕಿರುತ್ತದೆ ಎಂದರೆ ಸಾಕ್ಷಿ ಅದನ್ನು ನಾನೇ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ದಾವೆಯಲ್ಲಿ ಆ ಗೇಟನ್ನು ನಾನು ಮಾಡಿದ್ದು ಅಂತ ಹೇಳಿಕೊಂಡಿರುವುದಿಲ್ಲ.

6. ಸರ್ವೆ ನಂಬ್ರ 107/2 ಪಿ 2 ಹಾಗೂ ಸರ್ವೆ ನಂಬ್ರ 107/2 ಪಿ 4 ರ ಪೂರ್ವದಲ್ಲಿ ಸರ್ವೆ ನಂಬ್ರ 107/25 ರ ಸ್ಥಳ ಇದೆ ಎಂದರೆ ಸರಿ. ಸರ್ವೆ ನಂಬ್ರ 107/25 ರ ಪೂರ್ವದಲ್ಲಿ ಸರ್ವೆ ನಂಬ್ರ 107/27 ರ ಸ್ಥಳ ಇದೆ ಎಂದರೆ ಸರಿ. ಸರ್ವೆ ನಂಬ್ರ 107/27 ರ ಸ್ಥಳದ ದಕ್ಷಿಣದಲ್ಲಿ ಸರ್ವೆ ನಂಬ್ರ 107/1 ರ ಸ್ಥಳ ಇದೆ ಎಂದರೆ ಸರಿ. ಸರ್ವೆ ನಂಬ್ರ 107/2 ಪಿ 2 , ಸರ್ವೆ ನಂಬ್ರ 107/2 ಪಿ 4 , ಸರ್ವೆ ನಂಬ್ರ 107/25 ಸರ್ವೆ ನಂಬ್ರ 107/27 ರ ಮೂಲಕ ಯಾವುದೇ ರಸ್ತೆ ಹಾದು ಹೋಗುತ್ತದೆ ಎಂದು ವಿಭಾಗ ಪತ್ರದಲ್ಲಿ ನಮೂದು ಇರುವುದಿಲ್ಲ ಎಂದರೆ ಸರಿ.

7. ಸರ್ವೆ ನಂಬ್ರ 107/1 ಎ ಸ್ಥಳಕ್ಕೆ ಹೋಗಬೇಕಾದರೆ ರಾಷ್ಟ್ರೀಯ ಹೆದ್ದಾರಿಯಿಂದ ಸರ್ವೆ ನಂಬ್ರ 107/2 ಪಿ 2, ಸರ್ವೆ ನಂಬ್ರ 107/2 ಪಿ 4 ಸರ್ವೆ ನಂಬ್ರ 107/25 ಸರ್ವೆ ನಂಬ್ರ 107/27 ರ ಸರ್ವೆ ನಂಬ್ರ ಗಳ ಮೂಲಕ ಹಾದು ಹೋಗಬೇಕು ಎಂದರೆ ಸರಿ. ಸರ್ವೆ ನಂಬ್ರ 107/1 ಎ ಸ್ಥಳ ಎಂದರೆ ಉದಾಹರಣೆಯಲ್ಲಿನ ಶೆಡ್ಯೂಲ್ 5 ನೇ ಐಟಂ ನ ಸ್ಥಳ ಎಂದರೆ ಸರಿ. ಉದಾಹರಣೆ ಶೆಡ್ಯೂಲ್ 5 ನೇ ಐಟಂನ ದಕ್ಷಿಣದಲ್ಲಿ ಪ್ರತಿವಾದಿಗಳ ಕುಟುಂಬದ ಜಾಗ ಇರುತ್ತದೆ ಎಂದರೆ ಸರಿ.

8. ಸರ್ವೆ ನಂಬ್ರ 107/1 ಎ ರ ಸ್ಥಳದ ಮೂಲಕ ಸರ್ವೆ ನಂಬ್ರ 107/2 ಪಿ 2 , ಸರ್ವೆ ನಂಬ್ರ 107/2 ಪಿ 4, ಸರ್ವೆ ನಂಬ್ರ 107/ 25, ಸರ್ವೆ ನಂಬ್ರ 107/27 ರ ಆಸ್ತಿಗಳಿಂದ ಆರಂಭ ಆಗಿ ದಕ್ಷಿಣ ಮೂಲಕ ಹೋಗಬೇಕಾದರೆ ಉದಾಹರಣೆಯ ಶೆಡ್ಯೂಲ್ ಐಟಂ 5 ರ ಮೂಲಕ ಹೋಗಬೇಕಾಗುತ್ತದೆ ಎಂದರೆ ಸರಿ. ಕುಟುಂಬದ ಎಲ್ಲಾ ಸದಸ್ಯರಿಗೆ ದಕ್ಷಿಣ ದಿಕ್ಕಿಗೆ ಹೋಗಬೇಕು ಅಂತ ಹೇಳಿ ಉದಾಹರಣೆಯ ಶೆಡ್ಯೂಲ್ ಐಟಂ ನಂಬ್ರ 5 ರಲ್ಲಿ ದಾರಿಯ ಹಕ್ಕನ್ನು ಊರ್ಜಿತ ಇಟ್ಟಿರುತ್ತಾರೆ ಎಂದರೆ ಸರಿ.

9. ಉದಾಹರಣೆಯ ಶೆಡ್ಯೂಲ್ ಐಟಂ ನಂಬ್ರ 5 ರ ವಿಸ್ತೀರ್ಣ 2.5 ಸೆಂಟ್ಸ್ ಜಾಗ ಇರುತ್ತದೆ. ಶೆಡ್ಯೂಲ್ ಐಟಂ ನಂಬ್ರ 5 ರ 2.5 ಸೆಂಟ್ಸ್ ಜಾಗವನ್ನು ಯಾರಿಗೂ ವಿಂಗಡಿಸಿದೇ ರಸ್ತೆಗಾಗಿ ಬಿಟ್ಟಿರುತ್ತಾರೆ ಎಂದರೆ ಸರಿ. ಪ್ರತಿವಾದಿ ಕುಟುಂಬದವರು ಅವರ ಒಂದು ಕುಟುಂಬದ ಆಸ್ತಿಯಿಂದ ಇನ್ನೊಂದು ಕುಟುಂಬದ ಆಸ್ತಿಗೆ ಹೋಗಬೇಕಾದರೆ ಆ 2.5 ಸೆಂಟ್ಸ್ ಜಾಗದಲ್ಲಿ ಹೋಗುತ್ತಾರೆ ಎಂದರೆ ಸರಿ. 2.5 ಸೆಂಟ್ಸ್ ಜಾಗವನ್ನು ಪಂಚಾಯಿತಿಗೆ ಬಿಟ್ಟು ಕೊಟ್ಟ ಬಗ್ಗೆ ದಾಖಲೆ ನೋಡಿರುತ್ತೇನೆ. ಹಾಗೇ ನೋಡಿದ ದಾಖಲೆ ಯಾವುದು ಎಂದರೆ ಪಾಲು ಪಟ್ಟಿಯಲ್ಲಿ ವಿಂಗಡಿಸಿರುತ್ತಾರೆ ಎಂದು ನುಡಿಯುತ್ತಾರೆ. ಸಾಕ್ಷಿ ಪಂಚಾಯತಿಗೆ ಸ್ಟಾಂಪ್ ಪೇಪರ್ ನಲ್ಲಿ ಬರೆದುಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಆ ದಾಖಲೆಯನ್ನು ಹಾಜರು ಪಡಿಸಿರುತ್ತೇನೆ. ಅದರ ಹೆಸರು ಏನು ಎಂದು ಹೇಳಲು ಬರುತ್ತಿಲ್ಲ ಎಂದು ನುಡಿಯುತ್ತಾರೆ.

10. ಆ ದಾಖಲೆಯನ್ನು ನಾನು ಇವತ್ತಿನವರೆಗೂ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಪಂಚಾಯತಿಯಲ್ಲಿ ಆ ರೀತಿಯ ದಾಖಲೆ ಇರುವುದಿಲ್ಲ ಹಾಗೂ ನಾನು ಆ ದಾಖಲೆಯನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಈ ಮೊದಲು OS No.278/2018 ರಂತೆ ದಾವೆ ದಾಖಲಿಸಿದ್ದೆ ಎಂದರೆ ಸರಿ. ಆ ದಾವೆಯನ್ನು ನಾನು ನಿ.ಪಿ. 13 ರಂತೆ ವಾಪಾಸು ಪಡೆದಿರುತ್ತೇನೆ ಎಂದರೆ ಸಾಕ್ಷಿ ಊರಿನವರು ಪಂಚಾಯಿತಿ ಮಾಡಿ ವಾಪಾಸು ಪಡೆಯಲು ಹೇಳಿದ್ದರಿಂದ ಆ ದಾವೆ ವಾಪಾಸು ಪಡೆದಿರುತ್ತದೆ. ನಿಪಿ13 ರಲ್ಲಿರುವ ಸಹಿ ನನ್ನದೇ ಇರುತ್ತದೆ.

11. ನಾನು ಹಾಜರು ಪಡಿಸಿದ ದಾಖಲೆಗೆ ಪೂರಕವಾಗಿ ಆಗಿನ ಹೊಸಾಡು ಹಾಗೂ ತ್ರಾಸಿ ಗ್ರಾಮ ಪಂಚಾಯತಿಯವರು ಪಂಚಾಯಿತಿಗೆ ಈ ಸ್ಥಳ 2.5 ಸೆಂಟ್ಸ್ ಹಸ್ತಾಂತರವಾದ ಬಗ್ಗೆ ಯಾವುದೇ ಮಾಹಿತಿ ಲಭ್ಯ ಇರುವುದಿಲ್ಲ ಎಂದು ಹಿಂಬರಹ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ

ನಮಗೆ 2.5 ಸೆಂಟ್ಸ್ ಜಾಗ ಪಂಚಾಯಿತಿಗೆ ಹಸ್ತಾಂತರ ಮಾಡಿರುತ್ತಾರೆ ಅಂತ ಹಿಂಬರಹ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಹೊಸಾಡು ಗ್ರಾಮ ಪಂಚಾಯಿತಿಯವರು ಕೊಟ್ಟ ಆ ಹಿಂಬರಹವನ್ನು ನಾನು ನ್ಯಾಯಲಯಕ್ಕೆ ಹಾಜರು ಪಡಿಸಿರುತ್ತೇನೆ. ಹೊಸಾಡು ಗ್ರಾಮ ಪಂಚಾಯಿತಿಗೆ ಸದರಿ ಸ್ವತ್ತುಗಳು ಒಳಪಡುವ ಪೂರ್ವದಲ್ಲಿ ತ್ರಾಸಿ ಪಂಚಾಯಿತಿಗೆ ಸೇರಿದ್ದವು.

12. ಹಿಂದಿನ ತ್ರಾಸಿ ಪಂಚಾಯಿತಿಯವರು ಸದರಿ ರಸ್ತೆ ಖಾಸಗಿ ರಸ್ತೆ ಆಗಿದ್ದು ಪಂಚಾಯಿತಿಗೆ ಆ ರಸ್ತೆಯನ್ನು ಹಸ್ತಾಂತರಿಸಿದ ಬಗ್ಗೆ ಯಾವುದೇ ದಾಖಲಾತಿ ಇರುವುದಿಲ್ಲ ಅಂತ ಹಿಂಬರಹ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ರಸ್ತೆಯನ್ನು ಪಂಚಾಯಿತಿಗೆ ಹಸ್ತಾಂತರಿಸಿದ ಬಗ್ಗೆ ಹಿಂಬರಹ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಆ ಹಿಂಬರಹ ನಾನು ನ್ಯಾಯಲಯಕ್ಕೆ ಹಾಜರು ಪಡಿಸಿರುತ್ತೇನೆ.ಆಗಿನ ತ್ರಾಸಿ ಪಂಚಾಯಿತಿ ಆಗಲೀ, ಈಗಿನ ಹೊಸಾಡು ಪಂಚಾಯತಿಯವರು ನಾನು ಹೇಳಿದಂತೆ ಹಿಂಬರಹ ಕೊಟ್ಟಿರುವುದಿಲ್ಲ ಹಾಗೂ ನಾನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

13. ಸರ್ವೆ ನಂಬ್ರ 107/2 ಪಿ 2 , ಸರ್ವೆ ನಂಬ್ರ 107/2 ಪಿ 4, ಸರ್ವೆ ನಂಬ್ರ 107/ 25, ಸರ್ವೆ ನಂಬ್ರ 107/27 ರ ಸ್ವತ್ತುಗಳು ಈ ದಾವೆಯಲ್ಲಿ ಒಳಗೊಂಡಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಆ ಸರ್ವೆ ನಂಬ್ರಗಳನ್ನು ಸೇರಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಆ 4 ಆಸ್ತಿಗಳ ಮೇಲೆ ನನಗೆ ಹಕ್ಕು ಇಲ್ಲದೇ ಇರುವುದರಿಂದ ಅವುಗಳನ್ನು ನಾನು ಈ ಪ್ರಕರಣದಲ್ಲಿ ಸೇರಿಸಿರುವುದಿಲ್ಲ ಎಂದರೆ ಸಾಕ್ಷಿ ಅವರುಗಳು ನನಗೆ ಯಾವುದೇ ತೊಂದರೆ ಕೊಟ್ಟಿರುವುದಿಲ್ಲ ಹಾಗಾಗಿ ಆ 4 ಆಸ್ತಿಗಳನ್ನು ಸೇರಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಈ 4 ಆಸ್ತಿಗಳಲ್ಲಿ ಯಾವುದಾದರೂ ಹಕ್ಕು ಪ್ರಾಪ್ತ ಆಗಿದೆ ಎಂದು ಈ ದಾವೆಯಲ್ಲಿ ಹೇಳಿಕೊಂಡಿರುವುದಿಲ್ಲ.

ಈ ಸಂದರ್ಭದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು.

ಓ.ಹೇ.ಕೇ.ಸ.ಇದೆ

ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕುಂದಾಪುರ